# ಆಹಾ ಸುದ್ದಿ!

★ ಸಸಿತೋಟ



ಇದು ಜಪಾನಿನ ಟೋಕಿಯೋದ 'ಬುಕ್ ಆ್ಯಂಡ್ ಬೆಡ್'. ಅಂದರೆ ಪುಸ್ತಕ ಓದಿ ಓದಿ ಸುಸ್ತಾದಾಗ ಹಾಸಿಗೆಯಲ್ಲಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳಬಹುದು. ಓದಿನಲ್ಲಿ ಅಭಿರುಚಿ ಬೆಳೆಸಲು ಜಪಾನಿನಲ್ಲಿ ಇಂತಹ ಬುಕ್ ಕೆಫೆಗಳು ಹುಟ್ಟಿಕೊಂಡಿವೆಯಂತೆ. ಮನೆ ಬಾಡಿಗೆ ಗಗನಕ್ಕೇರಿರುವ ಟೋಕಿಯೋದಲ್ಲಿ ಬೇರೆ ಬೇರೆ ಕೆಲಸಗಳಿಗೂ ಇದು ಬಳಕೆಯಾಗಬಹುದು.

ಪಂಜಾಬಿನಲ್ಲಿ 186 ಮಂದಿ ಟೆಕಿಗಳು ಪೊಲೀಸ್ ಪೇದೆಗಳಾಗಿ ಕೆಲಸಕ್ಕೆ ಸೇರಿದ್ದಾರಂತೆ. ಪ್ರೊಬೆಷನರಿಗೆ ಮಾಸಿಕ ವೇತನ 10 ಸಾವಿರ ರೂಪಾಯಿ. ಎಂಟೆಕ್, ಎಂಎಸ್ಸಿ ಐಟಿ, ಬಿಎಸ್ಸಿ ಐಟಿ, ಎಂಸಿಎ, ಬಿಸಿಎ, ಇನ್ಫಾರ್ಮೇಷನ್ ಟೆಕ್ನಾಲಜಿ ಕುರಿತ ಡಿಪ್ಲೊಮಾ ಮಾಡಿದವರಿದ್ದಾರಂತೆ. ಎಲ್ಲವೂ ಕಾಲಚಕ್ರದ ಮಹಿಮೆ.



ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿರುವ ಈ ಚಿಕ್ಕ ಅಪಾರ್ಟ್‌ಮೆಂಟ್‌ನಲ್ಲಿರುವ ಸವಲತ್ತು ನೋಡಿ ಅಲ್ಲಿಯವರು ಮೂಗಿನ ಮೆಲೆ ಬೆರಳಿಟ್ಟಿದ್ದಾರಂತೆ. 200 ಚ.ಅಡಿ ಇರುವ ಈ ಮನೆಯಲ್ಲಿ ಅಡುಗೆಕೋಣೆಯಲ್ಲೇ ಸ್ನಾನದ ಟಬ್, ತೆರೆದ ಶೌಚಾಲಯವಿದೆಯಂತೆ. ಬಾಡಿಗೆ ಮಾಸಿಕ 38 ಸಾವಿರ ರೂಪಾಯಿ. ಬವಣೆ ಭಾರತವಾದರೂ ಒಂದೇ, ಅಮೆರಿಕವಾದರೂ ಒಂದೇ.




ಅಮೆರಿಕದ ಉತ್ತರ ಕೆರೊಲಿನಾದ ವಿಲ್ಮಿಂಗ್ಟನ್‌ನಲ್ಲಿ ಫ್ಲಾರೆನ್ಸ್ ಚಂಡಮಾರುತ ಎಲ್ಲವನ್ನೂ ಆಪೋಷನ ತೆಗೆದುಕೊಳ್ಳುತ್ತಿದೆ. ಆದರೆ ಅವರು ಎಷ್ಟೆಂದರೂ ಅಮೆರಿಕನ್ನರು. ಹರಿಕೇನ್ (ಚಂಡಮಾರುತ) ಪಾರ್ಟಿಗಳನ್ನು ಆಯೋಜಿಸಿಕೊಂಡು ಕುಡಿದು ಕುಪ್ಪಳಿಸುತ್ತಿದ್ದಾರಂತೆ. ರೋಮ್ ಹೊತ್ತಿ ಉರಿಯುತ್ತಿದ್ದರೆ, ನಿರೋ ಪಿಟೀಲು ಬಾರಿಸಿದನಂತೆ.

ಈತ ಒಡಿಶಾದ ಭುವನೇಶ್ವರದ ಸಂಚಾರ ನಿಯಂತ್ರಣ ಪೇದೆ ಪ್ರತಾಪ್ ಚಂದ್ರ ಖಾಂಡ್ವಾಲ್. ತನ್ನ ನೃತ್ಯದ ಹೆಜ್ಜೆಗಳ ಮೂಲಕವೇ ಸಂಚಾರ ನಿಯಂತ್ರಣ ಮಾಡುತ್ತಾನಂತೆ. ಆರಂಭದಲ್ಲಿ ವಾಹನ ಸವಾರರು ಅರ್ಥ ಮಾಡಿಕೊಳ್ಳದೇ ಕಕ್ಕಾಬಿಕ್ಕಿಯಾಗಿದ್ದೂ ಇದೆ. ಸದ್ಯ ಸಂಚಾರದ ಸಂಕೇತಗಳು, ನೃತ್ಯಾಭಿನಯ ಎರಡನ್ನೂ ಒಗ್ಗೂಡಿಸಿದ ಕೀರ್ತಿ ಪ್ರತಾಪ ಚಂದ್ರನದು.



ಭಾರತೀಯರಿಗೆ ಮಕ್ಕಳ ಬಗ್ಗೆ ಕಾಳಜಿ ಜಾಸ್ತಿ. ಆದರೆ ಇಲ್ಲೊಬ್ಬ ತಂದೆ ಸ್ಕಾಟ್ಲೆಂಡ್‌ನ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಮಗಳ ಮೇಲೆ ತೋರಿಸುತ್ತಿರುವ ಕಾಳಜಿ ವಿಪರೀತಕ್ಕೆ ಹೋಗಿದೆ. ಅಲ್ಲಿ ಮಗಳಿಗಾಗಿ ಒಂದು ಬಂಗ್ಲೆ ಖರೀದಿಸಿದ್ದು, 12 ಮಂದಿ ಸೇವಕರನ್ನು ಇಟ್ಟಿದ್ದಾನಂತೆ ಈ ಕೋಟ್ಯಧಿಪತಿ ತಂದೆ. ಜೊತೆಗೆ ಅಧ್ಯಯನಕ್ಕೆ ನೆರವಾಗಲು ನಾಲ್ವರು ತಜ್ಞರ ತಂಡ ನೇಮಿಸಿದ್ದಾನಂತೆ. ಒಬ್ಬೊಬ್ಬರ ಸಂಬಳವೂ ವರ್ಷಕ್ಕೆ 27– 28 ಲಕ್ಷ ರೂಪಾಯಿ! ಕೆಲವರು ಫಲಿತಾಂಶದಲ್ಲಿ ಮೇಲುಗೈ ಸಾಧಿಸಿ ಹೆಸರು ಮಾಡಿದರೆ, ಈಕೆ ಸೌಲಭ್ಯದಿಂದಾದರೂ ಹೆಸರು ಮಾಡಿದ್ದಾಳೆ.